BHIMAPPA SOMAPPA NAVI
Digitally signed by BHIMAPPA SOMAPPA NAVI
DN: c=IN, o=KARNATAKA STATE AKKAMAHADEVI WOMENS UNIVERSITY VIJAYAPURA, ou=NA, 2.5.4.20=db7789db39afe1f3d852b09ea3497499328f50a9eb82c5e3eb9b8da79cde486e, postalCode=586108, st=KARNATAKA, serialNumber=a2019af0af54b531e19e9c7b6fbd664dec1569beb802de3505e28213b85e6333, cn=BHIMAPPA SOMAPPA NAVI
Date: 2023.08.08 12:23:45 +05'30'

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ
Karnataka State Akkamahadevi Women's University, Vijayapura
(Formerly Karnataka State Women's University, Bijapur)

ಕುಲಸಚಿವರು
ಜ್ಞಾನಶಕ್ತಿ ಕ್ಯಾಂಪಸ್, ತೊರವಿ,
ವಿಜಯಪುರ-586 105 (ಕರ್ನಾಟಕ ರಾಜ್ಯ)
ದೂರವಾಣಿ ಸಂಖ್ಯೆ: 08352-229051

REGISTRAR
Jnanashakti Campus, Torvi
Vijayapura-586 105(Karnataka State)
Email:registrar.kswub@gmail.com Fax No: 08352-229057

## EXTRACT OF OFFICE ORDERS IN KANNADA (6.3.2)

Following documents in Kannada language are the office orders issued regarding policy document on providing financial support to teachers to attend conferences workshops 2017-18 to 2021-22:

5

6.3.2.4

# ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಾಪುರ

## (ಅಭಿವೃದ್ಧಿ ಕೋಶ)

ನಂ: ಕರಾಮವಿವಿ/ಅಭಿವೃದ್ಧಿಕೋಶ/ಸುತ್ತೋಲೆ/2010-11/3353

ದಿನಾಂಕ: 18-01-2011
29

## ಸುತ್ತೋಲೆ

**ವಿಷಯ:** ವಿತ್ತೀಯ ಸಹಾಯ ಮಾರ್ಗದರ್ಶಿ ನಿಯಮಗಳ ಕುರಿತು

**ಉಲ್ಲೇಖ:** 1. ದಿನಾಂಕ:28-12-2010 ರಂದು ಜರುಗಿದ ಸಿಂಡಿಕೇಟ್ ಅನುಮೋದನೆ ಸಭೆಯ ನಡಾವಳಿ

2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: -01-2011

ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಯವರು ವಿವಿಧೆಡೆ ಸಮ್ಮೇಳನ, ವಿಚಾರ ಸಂಕೀರಣ, ಕಾರ್ಯಾಗಾರ, ವಿಚಾರಗೋಷ್ಠಿಗಳಿಗೆ ಹಾಜರಾದಾಗ ನೀಡುವ ವಿತ್ತೀಯ ಸಹಾಯದ ಕುರಿತ ವಿತ್ತೀಯ ಸಹಾಯಕ ಮಾರ್ಗದರ್ಶಿ ನಿಯಮಗಳನ್ನು ಎಲ್ಲಾ ಬೋಧಕ ಸಿಬ್ಬಂದಿಯವರ ಅನುಕೂಲಕ್ಕಾಗಿ ಹಾಗೂ ಸದರಿ ಮಾರ್ಗದರ್ಶಿಯನ್ವಯ ಸೂಕ್ತ ಕ್ರಮಕೈಗೊಳ್ಳಲು ತಿಳಿಸಿ, ಈ ಸುತ್ತೋಲೆಯೊಂದಿಗೆ ಲಗತ್ತಿಸಿ ಕಳುಹಿಸಲಾಗಿದೆ.

ಕುಲಸಚಿವರು
27/1/11
ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಾಪುರ

ಗೆ,

1. ಮುಖ್ಯಸ್ಥರು/ಪ್ರಾಚಾರ್ಯರು, ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಕರಾಮವಿವಿ, ವಿಜಾಪುರ
2. ಕುಲಪತಿಗಳ ಆಪ್ತಕಾರ್ಯದರ್ಶಿಗಳು/ಕುಲಸಚಿವರ ಆಪ್ತಸಹಾಯಕರು , ಕರಾಮವಿವಿ, ವಿಜಾಪುರ
3. ಕಛೇರಿ ಪ್ರತಿ

ಸ್ವೀಕರಿಸಿದ ದಿನಾಂಕ 29 JAN 2011

# ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಾಪುರ

**ಸಮ್ಮೇಳನ, ವಿಚಾರ ಸಂಕಿರಣ, ಕಾರ್ಯಾಗಾರ, ವಿಚಾರಗೋಷ್ಠಿಗಳಿಗೆ ಹೋಗುವ ಶಿಕ್ಷಕ ಸಿಬ್ಬಂದಿಗೆ ನೀಡುವ ವಿತ್ತೀಯ ಸಹಾಯಕ್ಕೆ ಮಾರ್ಗದರ್ಶಿ ನಿಯಮಗಳು.**

1. ಒಂದು ಆರ್ಥಿಕ ವರ್ಷದಲ್ಲಿ ಒಬ್ಬ ಶಿಕ್ಷಕರು ಎರಡು ರಾಷ್ಟ್ರೀಯ ಅಥವಾ ಭಾರತದಲ್ಲಿ ಜರುಗುವ ಅಂತರರಾಷ್ಟ್ರೀಯ ಸಮ್ಮೇಳನ, ವಿಚಾರ ಸಂಕಿರಣ, ಕಾರ್ಯಾಗಾರ, ವಿಚಾರಗೋಷ್ಠಿಗಳಿಗೆ ಹೋಗಲು UGC-Travel Grant ನ ಅಡಿಯಲ್ಲಿ ವಿತ್ತೀಯ ಸಹಾಯ ಪಡೆಯಬಹುದಾಗಿದೆ.

2. ಒಬ್ಬ ಶಿಕ್ಷಕರು, ಮೂರು ಆರ್ಥಿಕ ವರ್ಷದಲ್ಲಿ ಒಂದು ಬಾರಿ ಅಂತರರಾಷ್ಟ್ರೀಯ ಪ್ರಯಾಣಕ್ಕಾಗಿ 100% ವಿತ್ತೀಯ ಸಹಾಯವನ್ನು ಹಣಕಾಸಿನ ಲಭ್ಯತೆ ಹಾಗೂ UGC ಅನುದಾನದ ನಿಯಮಗಳ ಷರತ್ತಿಗೊಳಪಟ್ಟು ಪಡೆಯಬಹುದಾಗಿದೆ.

3. ಈ ವಿತ್ತೀಯ ಸಹಕಾರವನ್ನು ಕೀ-ನೋಟ್ ಉಪನ್ಯಾಸ/ಪ್ಲೆನರಿ ಉಪನ್ಯಾಸ ನೀಡುವ ಶಿಕ್ಷಕರು, ಪ್ರಬಂಧ ಮಂಡಿಸುವ, ಗೋಷ್ಠಿಯ ಅಧ್ಯಕ್ಷತೆ ವಹಿಸುವ ಹಾಗೂ ಆಹ್ವಾನಿತ ಉಪನ್ಯಾಸ ನೀಡುವ/ಭಾಗವಹಿಸುವ ಶಿಕ್ಷಕರು, ಕಾರ್ಯಕ್ರಮ ಸಂಘಟಕರಿಂದ ಪ್ರಯಾಣಭತ್ಯೆ, ದಿನಭತ್ಯೆ ಪಡೆಯುವದಿಲ್ಲ ಎಂಬ ಷರತ್ತಿಗೊಳಪಟ್ಟು ಪಡೆಯಬಹುದಾಗಿದೆ.

4. ವಿಮಾನಯಾನ ಪ್ರಯಾಣ ಭತ್ಯೆ/ದ್ವಿತೀಯ ದರ್ಜೆ ಎ.ಸಿ.ರೈಲು ಪ್ರಯಾಣ/ಥ್ರಿ ಟಯರ್ ಎ.ಸಿ. ರೈಲು ಪ್ರಯಾಣ ಭತ್ಯೆಗೆ ಅವರು ಅರ್ಹರಿದ್ದರೆ ಅದನ್ನು ನೀಡಲಾಗುವದು, ಇಲ್ಲವೇ ನಿಯಮದನ್ವಯ ಅರ್ಹತೆ ಹೊಂದಿರುವ ರೈಲು ಪ್ರಯಾಣ ಭತ್ಯೆ ನೀಡಲಾಗುವುದು.

5. ವಿಮಾನಯಾನ ಪ್ರಯಾಣಭತ್ಯೆ/ದ್ವಿತೀಯ ದರ್ಜೆ ಎ.ಸಿ. ರೈಲು ಪ್ರಯಾಣಭತ್ಯೆಯ ಟಿಕೇಟನ್ನು ಸಾದರಪಡಿಸುವ ಷರತ್ತಿಗೆ ಒಳಪಟ್ಟಿದೆ.

6. ಸಮ್ಮೇಳನಗಳು, ವಿಚಾರ ಸಂಕಿರಣಗಳು, ವಿಚಾರ ಗೋಷ್ಠಿಗಳು ಹಾಗೂ ಕಾರ್ಯಾಗಾರಗಳು ಜರುಗುವ ಸ್ಥಳಗಳಲ್ಲಿ ರೈಲುಯಾನ/ವಿಮಾನಯಾನ ಸೌಲಭ್ಯ ಇಲ್ಲದಿದ್ದ ಪಕ್ಷದಲ್ಲಿ ವೇಗದೂತ ಹಾಗೂ ಸಾಮಾನ್ಯ ಬಸ್‌ಗಳ ಪ್ರಯಾಣ ಹೊರತುಪಡಿಸಿ ಇನ್ನಿತರ ಸುವಿಹಾರಿ (ರಾಜಹಂಸ, ಐರಾವತ, A/C Sleeper) ಪ್ರಯಾಣಕ್ಕೆ ಟಿಕೇಟ್‌ನ್ನು ಸಾದರ ಪಡಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

7. ಸಮ್ಮೇಳನಗಳು, ವಿಚಾರ ಸಂಕಿರಣಗಳು, ವಿಚಾರ ಗೋಷ್ಠಿಗಳು ಹಾಗೂ ಕಾರ್ಯಾಗಾರ ಜರುಗುವ ಸ್ಥಳಗಳನ್ನು ಕರ್ನಾಟಕ ರಾಜ್ಯ ಸರ್ಕಾರ ಪರಿಗಣಿಸಿದ ವರ್ಗೀಕರಣದ ಆಧಾರದ ಮೇಲೆ ದಿನಭತ್ಯೆ ಮಂಜೂರಿಸಲಾಗುವದು.

3

8. ಪೂರ್ಣ ಪ್ರಮಾಣದ ನೊಂದಣಿ ಶುಲ್ಕವನ್ನು ಮೂಲ ರಸೀದಿ ಸಲ್ಲಿಸುವ ಷರತ್ತಿಗೆ ಒಳಪಟ್ಟು ಮಂಜೂರಿಸಲಾಗುವದು.

9. ಸಮ್ಮೇಳನ/ವಿಚಾರಸಂಕಿರಣ/ವಿಚಾರಗೋಷ್ಠಿ/ಕಾರ್ಯಾಗಾರಗಳಲ್ಲಿ ಭಾಗವಹಿಸಲಿಚ್ಛಿಸುವ ಶಿಕ್ಷಕರು ಅರ್ಜಿಯನ್ನು ಸಮುಚಿತ ಮಾರ್ಗದಿಂದ ಕುಲಸಚಿವರು, ಕರಾಮವಿವಿ ಇವರಿಗೆ ವಿಭಾಗೀಯ ಪರಿಷತ್ತಿನ ಸ್ಪಷ್ಟ ಶಿಫಾರಸ್ಸಿನೊಂದಿಗೆ ಸಲ್ಲಿಸತಕ್ಕದ್ದು. ಅರ್ಜಿಯ ಜೊತೆಗೆ ಆಹ್ವಾನಪತ್ರಿಕೆ/Brochure/call for papers ನ ಪ್ರತಿ, ಸಂಘಟಕರಿಂದ ಮಂಡನೆಗೆ ಒಪ್ಪಲಾದ ಕುರಿತ ಪತ್ರ, ಮಂಡನೆಗೆ ಒಪ್ಪಲಾದ ಪತ್ರಿಕೆಯ ಸಂಕ್ಷಿಪ್ತ ವಿವರಗಳ ಹಾಗೂ ಅಂದಾಜು ವೆಚ್ಚ ಪಟ್ಟಿ ಲಗತ್ತಿಸಬೇಕು.

10. ಸಮ್ಮೇಳನ/ವಿಚಾರಸಂಕಿರಣ/ವಿಚಾರಗೋಷ್ಠಿ/ಕಾರ್ಯಾಗಾರಗಳಲ್ಲಿ ಭಾಗವಹಿಸಿ ಬಂದ ಏಳು ದಿನಗಳ ಒಳಗಾಗಿ ಪ್ರಯಾಣಭತ್ಯೆ/ದಿನಭತ್ಯೆ ಹಾಗೂ ನೊಂದಣಿ ಶುಲ್ಕದ ಬಿಲ್ಲುಗಳನ್ನು ವಿಭಾಗದ ಮುಖ್ಯಸ್ಥರ ಮುಖಾಂತರ, ಸದರಿ ಬಿಲ್ಲುಗಳ ಮೇಲೆ ಮುಖ್ಯಸ್ಥರ ದೃಢೀಕರಣದೊಂದಿಗೆ ಕುಲಸಚಿವರಿಗೆ ಸಲ್ಲಿಸತಕ್ಕದ್ದು. ಸದರಿ ಬಿಲ್ಲುಗಳ ಜೊತೆ ಈ ಕೆಳಕಂಡ ದಾಖಲೆಗಳನ್ನು ಲಗತ್ತಿಸುವದು.

   a) ಹಾಜರಾತಿ ಪ್ರಮಾಣಪತ್ರ
   b) ಪ್ರಯಾಣಭತ್ಯೆ/ದಿನಭತ್ಯೆ ಸಂಘಟಕರಿಂದ ಪಡೆದಿಲ್ಲವೆಂಬುದಕ್ಕೆ ಪ್ರಮಾಣಪತ್ರ
   c) ಮೂಲ ನೊಂದಣಿ ಶುಲ್ಕ ರಸೀದಿ.
   d) ಭಾಗವಹಿಸುವಿಕೆಯ ವರದಿ
   e) ವಿಮಾನಯಾನ/Boarding Pass.
   f) 2 Tier AC ರೈಲು ಟಿಕೇಟು
   g) ಸುವಿಹಾರಿ ಬಸ್ ಪ್ರಯಾಣದ ಟಿಕೇಟುಗಳು.

11. ಆಡಳಿತ ಶಾಖೆಯ ಪರಿಶೀಲನೆಯ ನಂತರ ಕುಲಸಚಿವರ ದೃಢೀಕೃತ ಸಹಿ ಪಡೆದು, ಆರ್ಥಿಕ ಅಧಿಕಾರಿಗಳ ಕಛೇರಿಗೆ ಹಣ ಸಂದಾಯಕ್ಕಾಗಿ ಸಲ್ಲಿಸುವದು. ಆರ್ಥಿಕ ಅಧಿಕಾರಿಗಳು ಕಛೇರಿ ಬಿಲ್ಲುಗಳನ್ನು ಪರಿಶೀಲಿಸಿ ಶಿಕ್ಷಕರಿಗೆ ಹಣ ಸಂದಾಯ ಮಾಡಬಹುದು.

12. ಸಂಶೋಧನಾ ಯೋಜನೆಗಳು/Sponsored Programmes/Projects ಅಡಿಯಲ್ಲಿ ಹೋಗುವ ಶಿಕ್ಷಕರಿಗೆ ಇದು ಅನ್ವಯಿಸುವುದಿಲ್ಲ.

ಸಹಿ/- 27/1/11
ಕುಲಸಚಿವರು
ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಾಪುರ